ಆ) 2006–07ನೇ ಸಾಲಿನಲ್ಲಿ 41985 44 ಲಕ್ಷ ರೂ ಗಳು ಒದಗಿಸಲಾಗಿದೆ

ಇ) ಖರ್ಚಾಗಿರುವ ಮೊತ್ತ (ಡಿಸೆಂಬರ್ 2006ರ ಅಂತ್ಯಕ್ಕೆ) 5827 92 ಲಕ್ಷ ರೂ ಗಳು ಉಳಿದಿರುವ ಮೊತ್ತ 36157 52 ಲಕ್ಷ ರೂ ಗಳು ಇದರಲ್ಲಿ 22639 00 ಲಕ್ಷ ರೂ ಗಳನ್ನು ಅಧ್ಯರ್ಪಣೆ ಮಾಡಲು ಪ್ರಸ್ತಾಪಿಸಿದೆ

730 (988) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಆಧಾರಿತ ರೈತರಿಗಾಗಲಿ, ಅವಲಂಬಿತ ಕಾರ್ಮಿಕರಿಗಾಗಲೀ ಹಾಗೂ ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದಕರಿಗೆ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು ,

ಆ) ಯಾವ ಯಾವ ಭಾಗದಲ್ಲಿ ಹಣ ಬಳಕೆಯಾಗಿದೆ ಮತ್ತು ಆಯವ್ಯಯದಲ್ಲಿ ತಿಳಿಸಿರುವಂತೆ "ರೇಷ್ಮೆ ವರದಾನ ಯೋಜನೆ"ಯನ್ನು ಸರ್ಕಾರ ಸ್ಥಾಪಿಸಲಾಗಿದೆಯೇ,

ಇ) ಇದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ ?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಪಡಿಸಲು ರೇಷ್ಮೆ ಬೆಳೆಗಾರರಿಗೆ ಮತ್ತು ರೀಲರುಗಳಿಗೆ ಸಹಾಯವಾಗುವ ಈ ಕೆಳಕಂಡ ಕಾರ್ಯಕ್ರಮಗಳಿಗೆ 2006–07ನೇ ಸಾಲಿಗೆ ಒಟ್ಟು ರೂ 3695 51 ಲಕ್ಷಗಳ ವಂಟನೆ ಒದಗಿಸಲಾಗಿದೆ ಜನವರಿ 2007ರ ಅಂತ್ಯದವರೆಗೆ ರೂ 2684 31 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

(ರೂ ಲಕ್ಷಗಳಲ್ಲಿ)

ಕ್ರ ಸಂ	ಕಾರ್ಯಕ್ರಮಗಳು	ವಂಟನೆ	ಬಿಡುಗಡೆ ಮಾಡಲಾದ ಹಣ
1	ಕೆಟಲಿಟಿಕ್ ಅಭಿವೃದ್ಧಿ ಯೋಜನೆ – ರಾಜ್ಯ ವಲಯ	2075 00	1775 00
2	ರೇಷ್ಮೆ ವರದಾನ ಯೋಜನೆ – ರಾಜ್ಯ ವಲಯ	500 00	100 00
3	ಹುಳು ಸಾಕಾಣಿಕೆ ಅಭಿವೃದ್ಧಿ – ರಾಜ್ಯ ವಲಯ	352 20	287 62
4	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು	655 73	476 47
5	ವಿಶೇಷ ಘಟಕ ಯೋಜನೆ – ಜಿಲ್ಲಾ ವಲಯ	86 98	40 00
6	ಗಿರಿಜನ ಉಪಯೋಜನೆ – ಜಿಲ್ಲಾ ವಲಯ	25 60	5 22
	ಒಟ್ಟು	**3695 51**	**2684 31**

ಆ) ಜಿಲ್ಲಾವಾರು ಬಳಕೆಯಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ

2006–07ನೇ ಸಾಲಿನಲ್ಲಿ 'ರೇಷ್ಮೆ ವರದಾನ ಯೋಜನೆ' ಕಾರ್ಯಕ್ರಮಕ್ಕೆ ರೂ 500 ಲಕ್ಷಗಳನ್ನು ಮೀಸಲಿರಿಸಲಾಗಿದ್ದು, ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು, ಅನುಷ್ಠಾನಕ್ಕೆ ತರಲಾಗಿದೆ

ಇ) ರೇಷ್ಮೆ ವರದಾನ ಯೋಜನೆಗೆ ಇದುವರೆಗೆ ರೂ 100 ಲಕ್ಷಗಳು ಬಿಡುಗಡೆಯಾಗಿದ್ದು, ಉಳಿದ ಹಣವನ್ನು ಸಹ ಬಿಡುಗಡೆ ಮಾಡಲು ಪರಿಶೀಲನೆಯಲ್ಲಿದೆ

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 988ರ ಅನುಬಂಧ

ರೇಷ್ಮೆ ಕೃಷಿ ಅಭಿವೃದ್ಧಿಗಾಗಿ 2006–07ನೇ ಸಾಲಿನ ಜನವರಿ 2007ರ ಅಂತ್ಯಕ್ಕೆ ಬಳಕೆಯಾದ ಮೊತ್ತದ ವಿವರ (ರೂ ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆಗಳು	ಬಳಕೆಯಾದ ಮೊತ್ತ
1	ಬೆಂಗಳೂರು (ಗ್ರಾಮಾಂತರ)	396 088
2	ಬೆಂಗಳೂರು (ನಗರ)	215 966
3	ಬಾಗಲಕೋಟೆ	43 858
4	ಬೆಳಗಾಂ	83 73
5	ಬಳ್ಳಾರಿ	35 01
6	ಬೀದರ್	48 019
7	ಬಿಜಾಪುರ	25 19
8	ಚಾಮರಾಜನಗರ	40 267
9	ಚಿಕ್ಕಮಗಳೂರು	28 240
10	ಚಿತ್ರದುರ್ಗ	48 750
11	ದಕ್ಷಿಣ ಕನ್ನಡ	9 695
12	ದಾವಣಗೆರೆ	18 731
13	ಧಾರವಾಡ	22 199
14	ಗದಗ್	15 250
15	ಗುಲ್ಬರ್ಗಾ	38 827
16	ಹಾಸನ	87 095
17	ಹಾವೇರಿ	32 518
18	ಕೊಡಗು	65 545
19	ಕೋಲಾರ	743 182
20	ಕೊಪ್ಪಳ	26 57

21	ಮಂಡ್ಯ	153 816
22	ಮೈಸೂರು	73 030
23	ರಾಯಚೂರು	42 068
24	ಶಿವಮೊಗ್ಗ	21 330
25	ತುಮಕೂರು	117 170
26	ಉಡುಪಿ	10 970
27	ಉತ್ತರ ಕನ್ನಡ	160 801
28	ಮೈಸೂರು ಬಿತ್ತನೆ ವಲಯ	80,400
	ಒಟ್ಟು	**2684 31**

731 (546) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2006ರಲ್ಲಿ ರಾಜ್ಯದ ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರವಾಹದಿಂದ ಉಂಟಾದ ನಷ್ಟದ ಪ್ರಮಾಣವೆಷ್ಟು ,

ಆ) ಈ ಪ್ರವಾಹದಿಂದ ನೊಂದವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು,

ಇ) ಪ್ರವಾಹದಿಂದ ಯಾವ ಯಾವ ಬೆಳೆ ನಾಶ, ಆಸ್ತಿ–ಪಾಸ್ತಿ ಹಾಗೂ ರಸ್ತೆ ಹಾಳಾಗಿದೆ ,

ಈ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ನೀಡಿದ ಪರಿಹಾರ ಮೊತ್ತವೆಷ್ಟು , (ಜಿಲ್ಲಾವಾರು ವಿವರ ನೀಡುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 2006ರಲ್ಲಿ ಪ್ರವಾಹದಿಂದ ಕೆಳಕಂಡಂತೆ ನಷ್ಟವಾಗಿರುತ್ತದೆ

ಬೆಳಗಾವಿ ರೂ 22675 06 ಲಕ್ಷ
ಬಿಜಾಪುರ ರೂ 2732 50 ಲಕ್ಷ
ಬಾಗಲಕೋಟೆ ರೂ 9902 34 ಲಕ್ಷ
ರಾಯಚೂರು ರೂ 1166 36 ಲಕ್ಷ
ಗುಲ್ಬರ್ಗಾ ರೂ 626 67 ಲಕ್ಷ

ಆ) ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಪ್ರವಾಹ ಪರಿಹಾರಕ್ಕೆ ಕೆಳಗಿನಂತೆ ಅನುದಾನ ಬಿಡುಗಡೆ ಮಾಡಿದೆ

ಬೆಳಗಾವಿ ರೂ 8363 17 ಲಕ್ಷ
ಬಿಜಾಪುರ ರೂ 519 06 ಲಕ್ಷ
ಬಾಗಲಕೋಟೆ ರೂ 1979 06 ಲಕ್ಷ
ರಾಯಚೂರು ರೂ 604 86 ಲಕ್ಷ
ಗುಲ್ಬರ್ಗಾ ರೂ 1595 83 ಲಕ್ಷ